ರಸಭರಿತಕಾವ್ಯವಾಗಿ ಹೃದ್ಗಮ್ಯವಾಗಿವೆ. ಇದು ಧ್ಯಾನಾನುಕೂಲವಾದ ಕೃತಿಗಳಿಂದ ಕೂಡಿ ಸಂಗೀತಮಯವಾಗಿದೆ. ಮನಸ್ಸಿಗೆ ಒಂದು ಉನ್ನತಿಕೆಯನ್ನೂ, ನಿಶ್ಚಲತೆಯನ್ನೂ ತಂದುಕೊಡಬಲ್ಲ ಶಕ್ತಿಯಿಂದ ಕೂಡಿದ ಸದ್ಗ್ರಂಥ ಇದು. ನಿಜಗುಣರ ಷಟ್ಶಾಸ್ತ್ರಗಳಲ್ಲಿ ಇದು ಉತ್ತರಕರ್ನಾಟಕದ ಮನೆಮನೆಗಳಲ್ಲಿಯೂ ಮೆರೆಯುತ್ತಿದೆ. ಇದು ಸಾಹಿತ್ಯಪ್ರಧಾನವಾಗಿ ರಚಿತಗೊಂಡ ಸಂಗೀತಕೃತಿ. ಸಾಹಿತ್ಯಕ್ಕೆ ಮಾತು, ಸಂಗೀತಕ್ಕೆ ಧಾತು. ಮಾತುಧಾತುಗಳ ಕಲಾತ್ಮಕ ಸಂಯೋಗವೇ ಈ ಕೃತಿ.

ಈ ಕೃತಿಯು **ಶಿವಕಾರುಣ್ಯಸ್ಥಲ, ಜೀವಸಂಬೋಧನಾಸ್ಥಲ, ನೀತಿಕ್ರಿಯಾಚರ್ಯಾಸ್ಥಲ, ಯೋಗಪ್ರತಿಪಾದನಾಸ್ಥಲ, ಜ್ಞಾನಪ್ರತಿಪಾದನಾಸ್ಥಲ** ಎಂದು ಐದು ಸ್ಥಲಗಳಾಗಿ ವಿಂಗಡಿಸಲ್ಪಟ್ಟಿದೆ. ಇವು ಜೀವಿಯು ಮುಕ್ತಿಶಿಖರವನ್ನೇರುವ ಕ್ರಮಸೋಪಾನಗಳಂತೆ ಜೋಡಿಸಲ್ಪಟ್ಟಿವೆ. ಲೌಕಿಕವಾಗಿ ಲಾಭ ಗಳಿಸಬೇಕಾದರೂ ಭಗವಂತನ ಕರುಣೆ ಮುಖ್ಯವಾಗಿ ಬೇಕೇ ಬೇಕು. ಇಂತಿರುವಾಗ ಅತ್ಯಮೂಲ್ಯವಾದ ಮೋಕ್ಷಸಂಪಾದನೆಗೆ ಶಿವನ ಕರುಣೆ ಅತ್ಯವಶ್ಯಕ. ಅದಕ್ಕಾಗಿಯೇ ಆತನ ಕರುಣೆಗಾಗಿ ಹಂಬಲಿಸಿ ಜೀವಿಯು ಆತನ ಸ್ತೋತ್ರಗೈಯಬೇಕು, ಅವನ ನಾಮಾವಳಿಯನ್ನು ಪಠಿಸಬೇಕು, ಅವನ ಮಂತ್ರ ಜಪಿಸಬೇಕು. ಈ ಮೂರೂ ರೀತಿಗಳಲ್ಲಿಯೂ ಅವನ ಗುಣಗಾನ ಮಾಡಬೇಕು. ಅಲ್ಲದೆ ಲೋಕದ ದ್ವಂದ್ವಗಳನ್ನೂ, ಅವನ್ನು ಬಿಡಿಸಲಾರದ ವಿಷಮತೆಯನ್ನೂ ಕಂಡು ನೋಯ್ದು, ಬಳಲುವ ಜೀವಿಯು ಅದರಾಚೆಯ ಅನುಭವವನ್ನು ಪಡೆಯುವ ಹಂಬಲದಿಂದ, ನಾನಾ ಬಗೆಯಾಗಿ ಕೊರಲೆತ್ತಿ ಭಗವಂತನನ್ನು ಪ್ರಾರ್ಥಿಸಬೇಕು. ಅದಕ್ಕೂ ಮಿಗಿಲಾಗಿ ತನ್ನ ನೀಚಕೃತ್ಯಗಳನ್ನು ಮನ್ನಿಸಿ ತನ್ನನ್ನು ಕಾಪಾಡೆಂದು ದೈನ್ಯದಿಂದ ಬೇಡಬೇಕು. ಇಂಥ ವಸ್ತು, ಭಾವನೆಗಳಿಂದ ಕೂಡಿದೆ ಮೊದಲನೆಯ **ಶಿವಕಾರುಣ್ಯಸ್ಥಲ**. ಇದರಲ್ಲಿ ೨೮ ಪದ್ಯಗಳಿವೆ. ಇದರಲ್ಲಿನ ಮುಖ್ಯಾಂಶ ಶಿವನ ಕರುಣೆಯನ್ನು ಪಡೆಯುವುದು. ಈ ಸ್ಥಲದ ಮೊದಲನೆಯ ಪದ್ಯದ **ಶ್ರೀಗುರುವಚನೋಪದೇಶವನಾಲಿಸಿದಾಗಳಹುದು ನರರಿಗೆ ಮುಕ್ತಿ** ಎಂಬ ಪಲ್ಲವಿಯಲ್ಲಿಯೇ ಅಧಿಕಾರಿ, ವಿಷಯ, ಸಂಬಂಧ, ಪ್ರಯೋಜನಗಳೆಂಬ ಅನುಬಂಧಚತುಷ್ಟಯವನ್ನು ಜೋಡಿಸಿ, ನಿಜಗುಣರು ತಮ್ಮ ಅಪ್ರತಿಮ ಪ್ರತಿಭೆಯನ್ನು ಮೆರೆದಿದ್ದಾರೆ.

ಮೊದಲನೆಯ ಸ್ಥಲದಲ್ಲಿ ಶಿವನ ಕರುಣೆ ಪಡೆದಾದ ಮೇಲೂ ಜೀವಿ ತಾನು ಹಾಗೂ ತನ್ನದರ ಬಗ್ಗೆ ವ್ಯಾಮೋಹ ಬಿಟ್ಟಿರುವುದಿಲ್ಲ. ಎಲ್ಲಿಯವರೆಗೆ ಅವನು ಮೋಹದಿಂದ ಕೂಡಿರುತ್ತಾನೋ ಅಲ್ಲಿಯವರೆಗೆ ಮೋಕ್ಷಸಾಧನೆ ಕನಸಿನ ಗಂಟು. ಆದುದರಿಂದ ಎರಡನೆಯ **ಜೀವಸಂಬೋಧನಾಸ್ಥಲ**ದಲ್ಲಿ **"**ಎಲೆ ಜೀವ! ನೀನು ನಿಜಕ್ಕೂ ಪರಮಾತ್ಮನೆ ಆಗಿರುವೆ, ಆದರೆ ಅಜ್ಞಾನವಶವರ್ತಿಯಾಗಿ ವ್ಯಾಮೋಹದಲ್ಲಿ ಸಿಲುಕಿಕೊಂಡಿರುವುದರಿಂದ ನಾನು ದುಃಖಿಯೆಂದೂ, ಭವಮಾಲೆಯ ಬಂಧನಕ್ಕೊಳಗಾಗಿದ್ದೇನೆಂದೂ ಶೋಕಿಸುತ್ತೀಯೆ. ಆದುದರಿಂದ ಈ ವ್ಯಾಮೋಹವನ್ನು ಬಿಡು**"** ಎಂದು ಜೀವಿಯನ್ನು ಸಂಬೋಧಿಸಿ ಎಚ್ಚರಿಸುತ್ತಾ, ಕಾಯದ ಅನಿತ್ಯತೆ, ಸತಿಸುತರ ತೋರಿಕೆಯ ಪ್ರೀತಿವಾತ್ಸಲ್ಯ ಹಾಗೂ ಹೊನ್ನು ಹೆಣ್ಣು ಮಣ್ಣುಗಳ ದೋಷಗಳನ್ನು ಮನಸ್ಸಿಗೆ ನಾಟುವಂತೆ ನಿರೂಪಿಸಿ, ವೈರಾಗ್ಯ ಹುಟ್ಟುವಂತೆ ಪ್ರಚೋದಿಸಿ, ಅವುಗಳ ಬಗ್ಗೆ ಇರುವ ನಮ್ಮ ವ್ಯಾಮೋಹವನ್ನು ನಿಜಗುಣರು ಬಿಡಿಸುತ್ತಾರೆ.

ಹೀಗೆ ವ್ಯಾಮೋಹ ಅಳಿದ ಮೇಲೂ ಚಿತ್ತಸಂಸ್ಕಾರಕ್ಕಾಗಿ ಜೀವಿಯು ನೀತಿನಿಯಮಗಳಿಂದ ನಡೆಯಬೇಕು. ಸತ್ಕ್ರಿಯೆಗಳನ್ನು ಆಚರಿಸಬೇಕು. ಅದಕ್ಕಾಗಿ ಜೀವಿಯು ಸನ್ಮಾರ್ಗದತ್ತ ನಡೆಯಲು ಆಚರಿಸಬೇಕಾದ ವಿಧಿನಿಷೇಧಗಳನ್ನು ಸೂಚಿಸಿ ಅವನ ನಡೆಯು ಹೇಗಿರಬೇಕೆಂದು **ನೀತಿಕ್ರಿಯಾಚರ್ಯಾಸ್ಥಲ**ದಲ್ಲಿ ಬೋಧಿಸುತ್ತಾರೆ. ಹೀಗೆ ಮೊದಲ ಮೂರುಸ್ಥಲಗಳಲ್ಲಿ ಕ್ರಮವಾಗಿ ಶಿವಕಾರುಣ್ಯಪಡೆದು, ಆಣವ, ಮಾಯಾ, ಕಾರ್ಮಿಕ ಮಲಗಳನ್ನು ಕಳೆಯಲು ನೆರವಾಗುತ್ತಾರೆ.

ಇಷ್ಟಾದರೂ ಜೀವಿಗೆ ವಿಕ್ಷೇಪದೋಷ ಅಂದರೆ ಮನಸ್ಸಿನ ಚಂಚಲ ಸ್ವಭಾವ ಹೋಗಿರುವುದಿಲ್ಲ ಅಂದರೆ ಚಿತ್ತವೃತ್ತಿನಿರೋಧವಾಗಿರುವುದಿಲ್ಲ. **ಯೋಗಶ್ಚಿತ್ತವೃತ್ತಿನಿರೋಧಃ** ಎಂಬ ಪಾತಂಜಲ ಸೂತ್ರದಂತೆ ಚಿತ್ತವೃತ್ತಿನಿರೋಧಕ್ಕಾಗಿ ಆಯಾ ಜೀವಿಯ ಸಂಸ್ಕಾರಕ್ಕೆ ತಕ್ಕಂತೆ ಮಂತ್ರಯೋಗ, ಲಯಯೋಗ, ಹಠಯೋಗ, ರಾಜಯೋಗ ಹಾಗೂ ಶಿವಯೋಗಗಳನ್ನು **ಯೋಗಪ್ರತಿಪಾದನಾಸ್ಥಲ**ದಲ್ಲಿ ಬೋಧಿಸಿ, ಯೋಗಾಭ್ಯಾಸವನ್ನು ಮಾಡಲು ಜೀವಿಯನ್ನು ನಿಜಗುಣರು ಪ್ರೇರೇಪಿಸುತ್ತಾರೆ.

ಈ ಪ್ರಕಾರವಾಗಿ **ಪಡೆ, ಬಿಡು, ನಡೆ** ಹಾಗೂ **ಮಾಡು** ಎಂದು ಅರುಹಿದ ನಿಜಗುಣರು ಮುಂದೆ **ಜ್ಞಾನಪ್ರತಿಪದನಾಸ್ಥಲ**ದಲ್ಲಿ ಜೀವಿಯ ಆವರಣದೋಷವನ್ನು ಕಳೆಯಲು ಜ್ಞಾನದ ಸ್ವರೂಪ, ಅದನ್ನು ಪಡೆಯುವ ವಿಧಿವಿಧಾನಗಳನ್ನು ಸವಿಸ್ತಾರವಾಗಿ ನಿರೂಪಿಸಿ, **'**ಪರಮನನ್ನು ಕೂಡಿಕೋ**'** ಎಂದು ಜೀವಿಗೆ ಬೋಧಿಸುತ್ತಾರೆ. ಇಂತು ಹಂತಹಂತವಾಗಿ ಕೈವಲ್ಯಸೋಪಾನವನ್ನು ಹತ್ತಿ ಪರಮನನ್ನು ಬೆರೆಯುವ ಮಾರ್ಗವನ್ನು ಚಿತ್ರಿಸಿದ್ದಾರೆ. ಆ ಮಹನೀಯರ ಶ್ರಮದ ಫಲವನ್ನು ನಾಡಿನ ಜನತೆ ಪಡೆದುಕೊಂಡು ತಮ್ಮ ಆತ್ಮೋದ್ಧಾರ ಮಾಡಿಕೊಳ್ಳಬೇಕು. ಆಗ ಅವರ ಗ್ರಂಥರಚನೆಯ ಸದುದ್ದೇಶವು ಸಾರ್ಥಕವಾದಂತಾಗುತ್ತದೆ.

ಪ್ರಿಯ ಓದುಗರೇ, ದಯವಿಟ್ಟು ಗಮನಿಸಿ

**ವಿವೇಕಪ್ರಭ ಪತ್ರಿಕೆಯ ಚಂದಾವಿವರ, ಪತ್ರಿಕೆಯು ಸಕಾಲದಲ್ಲಿ ಬರದಿದ್ದರೆ ವಿಚಾರಣೆ – ಮುಂತಾದವುಗಳ ಬಗ್ಗೆ ನೀವು ಈ ಕೆಳಗಿನ ಮೊಬೈಲ್ ದೂರವಾಣಿ ಸಂಖ್ಯೆಗೆ ನೇರವಾಗಿ ಕರೆಮಾಡಬಹುದು:**

**9481533505**

**(ಶ್ರೀ ಕೆ. ಪಿ. ವೇಣುಗೋಪಾಲ್)**

**(ಬೆಳಗ್ಗೆ 10.30 ರಿಂದ ಸಂಜೆ 5.30 ರವರೆಗೆ ಮಾತ್ರ, ಭಾನುವಾರ ಮತ್ತು ರಜಾದಿನಗಳನ್ನು ಹೊರತುಪಡಿಸಿ.)**

# ಮಡಕೆಯ ಕಥೆ

**ಗುರುದಾಸ**



ಇದು ಬಹಳ ಹಿಂದಿನ ಕಾಲದ ಕಥೆ. ಭಾರತದ ಯಾವುದೋ ಒಂದು ಪ್ರದೇಶದಲ್ಲಿ ಪ್ರಚಲಿತವಾಗಿರುವ ಕಥೆ. ಒಬ್ಬ ರಾಜಕುಮಾರ ಇದ್ದ. ಅವನು ವೈಭೋಗದ ಅತ್ಯುನ್ನತ ಶಿಖರಕ್ಕೇರಿದ್ದರೂ ಉದಾಸೀನನಾಗಿದ್ದ. ಅವನ ಮನಸ್ಸು ಏನೋ ಒಂದು ಗಂಭೀರ ಪ್ರೇರಣೆಯನ್ನು ಪಡೆದು ಅತ್ಯಂತ ವ್ಯಾಕುಲವಾಗಿತ್ತು.

ಅದೇನದು? ಅಮೃತತ್ವದ ಸೆಳೆತದ ಆಕಾಶವಾಣಿ ಅವನಿಗೆ ಕೇಳಿ ಬಂತೇನು? ಮನೆಯವರು ಅವನನ್ನು ತಮ್ಮ ಹತೋಟಿಯಲ್ಲಿ ಹಿಡಿದಿಟ್ಟುಕೊಳ್ಳಲಾಗಲಿಲ್ಲ. ವೈರಾಗ್ಯದ ಸೆಳೆತದಿಂದ ರಾಜಕುಮಾರ ಒಂದು ದಿನ ಹಠಾತ್ತಾಗಿ ಮನೆಬಿಟ್ಟು ಕಣ್ಮರೆಯಾದ. ಅವನ ಸುಳಿವು ಯಾರಿಗೂ ಸಿಕ್ಕಲಿಲ್ಲ. ಪರಿಚಿತ ವಾತಾವರಣದಿಂದ ಮರೆಯಾದ. ರಾಜಕುಮಾರ ಈಗ ದಾರಿ ಸವೆಸುತ್ತಿದ್ದಾನೆ; ಮನಸ್ಸಿನ ಅಂತರಾಳದಲ್ಲಿ ಭಾವಿಸುತ್ತಿದ್ದಾನೆ, "ನನಗೆ ದಾರಿ ತೋರಿಸುವವರಾರು? ಭವಸಾಗರವನ್ನು ದಾಟಿಸುವ ಆ ಅಂಬಿಗ ಎಲ್ಲಿದ್ದಾನೆ?"

ಹೀಗೆ ಯಾವುದೋ ಒಂದು ದಿನ, ಬೆಳಗಿನ ಹೊತ್ತು, ಹಸಿರು ವನರಾಜಿಯಿಂದ ಕೂಡಿದ ಒಂದು ಆಶ್ರಮವನ್ನು ಅವನು ಸೇರಿದ. ದೂರದಲ್ಲಿ ಬೆಟ್ಟ, ಅರಣ್ಯ, ನಿರ್ಜನ ಪ್ರದೇಶದ ಮೌನಧ್ವನಿ ಒಂದು ದಿಕ್ಕಿನಲ್ಲಿ ಕಂಡು ಬಂದರೆ, ಇನ್ನೊಂದು ದಿಕ್ಕಿನಲ್ಲಿ ನಿರಾಳವಾದ ಜನರಹಿತ ತಪೋವನ ಕಾಣಬರುತ್ತಿತ್ತು. ಒಬ್ಬರು ಋಷಿಗಳು ಶಾಸ್ತ್ರಾಧ್ಯಯನ ಮಾಡುತ್ತಿದ್ದಾರೆ. ಮುಂಜಾವಿನ ಸೂರ್ಯನ ಕಿರಣಗಳಂತೆ ಅವರ ಮುಖ ಪ್ರಜ್ವಲಿಸುತ್ತಿದೆ. ಆ ಋಷಿಗಳ ಬಳಿ ಹೋದ ರಾಜಕುಮಾರ ಮುಗ್ಧಭಾವದಿಂದ ಅವರ ಪಾದಗಳನ್ನು ಮುಟ್ಟಿ ನಮಸ್ಕರಿಸಿದ.

"ಎಲ್ಲಿಂದ ಬರುತ್ತಿದ್ದೀಯೆ, ಕುಮಾರಾ?"

"ಗುರುಗಳೇ, ನಾನು ದಾರಿ ತಪ್ಪಿ ಬಂದಿದ್ದೇನೆ. ದಯಮಾಡಿ ನನಗೆ ದಾರಿ ತೋರಿಸಬೇಕು."

"ಯಾವ ದಾರಿ ಬೇಕು, ಮಗು?"

"ಶ್ರೇಯಸ್ಸಿನ ದಾರಿ, ಭಗವನ್."

"ಅದು ತುಂಬಾ ಕಠಿಣ. ಕತ್ತಿಯ ಅಲಗಿನಂತೆ ಇರುವ ಮಾರ್ಗ. ಅಸೀಮ ಮನೋಬಲದಿಂದ ಈ ದಾರಿಯಲ್ಲಿ ನಡೆಯಬೇಕಾಗುತ್ತದೆ. ಪ್ರತಿಕ್ಷಣದಲ್ಲಿಯೂ ಬೀಳುವ ಭಯವಿರುತ್ತದೆ."

"ನಿಮ್ಮ ಆಶೀರ್ವಾದವಿದ್ದರೆ, ದಾರಿಯಲ್ಲಿ ಸುಗಮವಾಗಿಯೇ ಚಲಿಸಬಹುದು, ಗುರುಗಳೇ."

"ಭೇಷ್! ಆಶ್ರಮದಲ್ಲಿ ವಾಸಮಾಡು, ಮಗು. ಆದರೆ ಇಲ್ಲಿ ಬಹಳಷ್ಟು ಕೆಲಸಕಾರ್ಯಗಳನ್ನು ಮಾಡಬೇಕಾಗುತ್ತದೆ. ನಿನ್ನ ಕೋಮಲ ದೇಹ ಆ ಪರಿಶ್ರಮವನ್ನು ತಡೆಯುತ್ತದೆಯೇ?"

"ನನ್ನಿಂದ ಸಾಧ್ಯವಾದಷ್ಟು ಮಟ್ಟಿಗೆ ಪ್ರಯತ್ನಿಸುವೆ."

"ನೀನು ಆಶ್ರಮದ ಕೆಲಸಕಾರ್ಯಗಳಲ್ಲಿ ಈಗಿಂದೀಗಲೆ ಮಗ್ನನಾಗು. ಸಮಯ ಬಂದಾಗ ನಾನು ನಿನಗೆ ಹೇಳಿಕಳಿಸುತ್ತೇನೆ."

ರಾಜನ ಮಗ ಆಶ್ರಮವಾಸಿಯಾದ. ಸೂರ್ಯೋದಯದಿಂದ ಸೂರ್ಯಾಸ್ತದವರೆಗೂ ಆಶ್ರಮದ ಎಲ್ಲ ಕೆಲಸಗಳನ್ನು ಬಿಡುವಿಲ್ಲದೆ ಅವನು ಮಾಡಬೇಕಿತ್ತು. ಅವಿಶ್ರಾಂತವಾಗಿ ಕುಂಬಾರನ ಚಕ್ರ ತಿರುಗುವ ರೀತಿಯಲ್ಲಿ ಅಲ್ಲಿ ಕೆಲಸಕಾರ್ಯಗಳು ನಡೆಯುತ್ತಿವೆ. ನಿಧಾನವಾಗಿ ಅವನಿಗೆ ಕೆಲಸಗಳು ರೂಢಿಯಾಗುತ್ತಿವೆ. ಅಭ್ಯಾಸರಹಿತ ಕೈಗಳಲ್ಲಿ ಈಗ ನಿಪುಣತೆ ಅರಳುತ್ತಿದೆ. ಮನಸ್ಸು ಜಾಗೃತವಾಗುತ್ತಿದೆ. ದೇಹ ಸಜ್ಜುಗೊಳ್ಳುತ್ತಿದೆ.

ಗಹನವಾದ ವೈರಾಗ್ಯದ ಪ್ರೇರಣೆಯಿಂದ ರಾಜ್ಯಭೋಗಗಳನ್ನು

ಬಿಟ್ಟು ಬಂದಿದ್ದ ಅವನ ಸಾಧನೆ ಆರಂಭವಾಗುವುದೆಂದು? ದಿನಗಳು ಉರುಳುತ್ತಿವೆ. ಮಾಸಗಳು, ಋತುಗಳು ತಮ್ಮಷ್ಟಕ್ಕೆ ತಾವೇ ತಿರುಗುತ್ತಿವೆ. ಮರಗಳ ಎಲೆಗಳು ಉದುರುತ್ತಿವೆ; ಮತ್ತೆ ಹೊಸ ಚಿಗುರು ಅದೇ ಮರಗಳ ಕಾಂಡದಲ್ಲಿ ಹುಟ್ಟುತ್ತಿವೆ. ಹೂವುಗಳು ಅರಳುತ್ತಿವೆ, ಹೂವುಗಳು ಉದುರುತ್ತಿವೆ. ಫಲಗಳು ಪಕ್ವವಾಗುತ್ತಿವೆ, ಫಲಗಳು ಕೆಳಗೆ ಬೀಳುತ್ತಿವೆ. ಆದರೆ, ರಾಜಕುಮಾರನ ಜೀವನಕ್ರಮದಲ್ಲಿ ಮಾತ್ರ ಏನೂ ಬದಲಾವಣೆಯೇ ಆಗುತ್ತಿಲ್ಲ. ಯಾವುದೋ ಕಷ್ಟದ ನಿಯಮಗಳ ಸರಪಳಿಗಳಿಂದ ಕಟ್ಟಿಹಾಕಿಕೊಂಡಂತೆ ಇದೆ ಅವನ ಬಾಳು!

ರಾಜಕುಮಾರನ ಮನಸ್ಸಿನಲ್ಲಿ ಸಂಶಯ ಹುಟ್ಟಿಕೊಂಡಿತು: "ಹಾಗಿದ್ದರೆ ಈ ಕಾಯಕ ಪರಿಶ್ರಮಗಳಲ್ಲೇ ಜೀವನ ಮುಗಿದು ಹೋಗುವುದೇ? ಅಂತರಾಳದ ಪ್ರೇರಣೆ ವಿಫಲವಾಗಿ ಹೋಗು ವುದೇ?"

ಅವನು ಮಾಡುವ ಕೆಲಸಗಳನ್ನು ಎಲ್ಲರೂ ಮೆಚ್ಚಿಕೊಳ್ಳುತ್ತಿದ್ದರು, ಗುರುಗಳೂ ಕೂಡ. ಆದರೆ ಯಾರೂ ಅವನ ವಿದ್ಯಾಭ್ಯಾಸದ ಸುದ್ದಿಯನ್ನೇ ಎತ್ತುತ್ತಿಲ್ಲ! ರಾಜಕುಮಾರ ಹೀಗೆ ಭಾವಿಸಿದ: "ಇನ್ನು ಇಲ್ಲಿ ಇದ್ದು ಲಾಭವಿಲ್ಲ. ಬೇರೆ ಎಲ್ಲಾದರೂ ಹೊರಟು ಹೋಗುವುದೇ ಲೇಸು. ತುಂಬಾ ಕಷ್ಟವನ್ನೇನೋ ಅನುಭವಿಸಿದ್ದೇನೆ. ಆದರೆ ಫಲವೇ ಸಿಗುತ್ತಿಲ್ಲವಲ್ಲ?!" ಹೀಗೆ ಬಹಳಷ್ಟು ಸಲ ವಿಚಾರ ಮಾಡಿ ಹತಾಶನಾದ.

ಒಮ್ಮೆ ಆಶ್ರಮದ ಸಾಧುಗಳು ನೀರು ಕುಡಿಯಲು ಉಪ ಯೋಗಿಸುವ ಮಡಕೆಯನ್ನು ಅವನು ಕೈಯಲ್ಲಿ ಹೊತ್ತುಕೊಂಡಿದ್ದ. ಅದು ಅಂದವಾದ ಮಡಕೆ; ಕೆಂಪು ಬಣ್ಣದ್ದು. ದಟ್ಟವಾದ ಕಾಡಿನ ದಾರಿಯಲ್ಲಿ ನಡೆದುಹೋಗಬೇಕು, ಝರಿಯ ಬಳಿ – ನೀರನ್ನು ತರಲು. ನಡೆದು ಹೋಗುವಾಗ ಒಂದು ಭಾವನೆ ಅವನ ತಲೆಯನ್ನು ಹೊಕ್ಕಿತು. "ಈ ಮಡಕೆಯನ್ನು ಝರಿಯ ತೀರದಲ್ಲಿ ಬಿಸಾಡಿ, ಯಾವ ದಿಕ್ಕಿಗೆ ಕಣ್ಣು ಹೊರಳುತ್ತದೆಯೋ ಆ ಕಡೆಗೆ ಹೋಗಿಬಿಡುವುದು. ಅದಾದ ನಂತರ ನಾನು ಮುಕ್ತ."

ಹೇಗೆ ಭಾವಿಸಿದನೋ, ಹಾಗೇ ಮಾಡಿದ. ಏನಾಶ್ಚರ್ಯ! ಯಾರೋ ಕರೆದಂತಾಯಿತು. ಹಿಂತಿರುಗಿ ನೋಡಿದ. ಆ ಮಡಕೆಯಿಂದಲೇ ಶಬ್ದ ಬರುತ್ತಿದೆ. ರಾಜಕುಮಾರ ಒಮ್ಮೆಗೇ ವಿಸ್ಮಿತನಾದ. ಮಡಕೆ ಕೇಳಿತು, "ಎಲ್ಲಿಗೆ ಹೋಗುತ್ತಿರುವೆ ರಾಜಕುಮಾರ? ನನ್ನನ್ನು ಬಿಟ್ಟು ಹೊರಟು ಹೋಗುತ್ತಿದ್ದೀಯಾ? ನೀನೇನು ತುಂಬಾ ಕಷ್ಟಪಟ್ಟಿ ದ್ದೀಯೇನು? ನಿನಗಿಂತ ಕಷ್ಟಪಟ್ಟ ನಂತರವಷ್ಟೇ ನಾನೀಗ ಈ ಸಾಧು ಸಂತರ ಸೇವೆಯಲ್ಲಿ ನಿರತನಾಗಿದ್ದೇನೆ. ನನ್ನ ಕಷ್ಟದ ಕಥೆ ಸ್ವಲ್ಪ ಸುಮ್ಮನೆ ಕೇಳು.



ಆನಂತರವೂ ನಿನಗೇನಾದರೂ ಹೊರಟು ಹೋಗಬೇಕೆನಿಸಿದರೆ ನಿನ್ನನ್ನು ನಾನು ತಡೆಯುವುದಿಲ್ಲ."

ವಿಸ್ಮಿತನಾದ ರಾಜಕುಮಾರ ಹೇಳಿದ, "ಹೇಳು, ಕೇಳೋಣ. ನಿನ್ನ ಕಷ್ಟದ ಕಥೆಯನ್ನು. ನನ್ನ ಕಷ್ಟದ ಬಗ್ಗೆ ನಿನಗೆ ಗೊತ್ತಿರುವಾಗ, ನಿನ್ನ ಕಷ್ಟದ ಕಥೆ ಕೇಳಲು ನನಗೇನು ತೊಂದರೆ?" ಮಡಕೆ ಹೇಳಿತು, "ಹಾಗಿದ್ದಲ್ಲಿ ಕೇಳು, ಅಯ್ಯಾ! ನಾನು ಮೊದಲು ಆಗಿದ್ದುದ್ದು ಜೇಡಿ ಮಣ್ಣು. ಭೂಮಿತಾಯಿಯ ಗರ್ಭದಲ್ಲಿ ಬೆರೆತು ಹೋಗಿದ್ದೆ. ಆಗ ನನಗೆ ನನ್ನದೇ ಆದ ಅಸ್ತಿತ್ವ ಇರಲಿಲ್ಲ. ಎಲ್ಲರೂ ನನ್ನನ್ನು ತುಳಿದಾಡುತ್ತಿದ್ದರೂ ಕೂಡ ನನ್ನಲ್ಲಿ ಅದರ ಅರಿವೇ ಇರಲಿಲ್ಲ. ಏಕೆಂದರೆ 'ನಾನು' ಎಂಬುದು ಇನ್ನೂ ನನ್ನಲ್ಲಿ ಹುಟ್ಟಿರಲಿಲ್ಲ. ಹಠಾತ್ ಒಂದು ದಿನ ಒಬ್ಬ ಕುಂಬಾರ ನೆಲವನ್ನು ಅಗೆದು ನನ್ನನ್ನು ಮೇಲೆತ್ತಿದ. ನನ್ನ ಪರಿಚಿತ ವಾತಾವರಣದಿಂದ ಬೇರೊಂದು ಜಾಗಕ್ಕೆ ಸ್ಥಳಾಂತರಿಸಿ ಒಂದು ಗುಡ್ಡೆ ಮಾಡಿದ. ಹಾಗೆ ಬಿದ್ದವನು ಬಿದ್ದೇ ಇದ್ದೆ. ಕೇವಲ ಒಂದು ರಾಶಿ ಮಣ್ಣು. ಸೂರ್ಯನ ತಾಪಕ್ಕೆ ಬತ್ತಿಹೋಗುತ್ತಿದ್ದೆ; ಕೆಲವೊಮ್ಮೆ ಮಳೆಯ ನೀರಿಗೆ ಕೆಸರಾಗುತ್ತಿದ್ದೆ. ಯಾರೂ ನನ್ನ ಬಗ್ಗೆ ತಲೆಕೆಡಿಸಿಕೊಳ್ಳುತ್ತಲೇ ಇರಲಿಲ್ಲ. ನಾನು ಭಾವಿಸುತ್ತಿದ್ದೆ. ಏನು, ಯಾರೂ ಗಮನಿಸದೆ ಹೀಗೆಯೇ ಬಿದ್ದು ನಷ್ಟವಾಗಿ ಹೋಗುವೆನೇನು?

"ಓ! ಹಠಾತ್ ಒಂದು ದಿನ ಕುಂಬಾರನ ಕೈಗಳು ನನ್ನ ಮೇಲೆ ಬಿದ್ದವು. ಅವನು ನನ್ನ ಪ್ರತಿ ಕಣವನ್ನೂ ಬೇರೆ ಬೇರೆ ಮಾಡಿ, ಅದರಲ್ಲಡಗಿರುವ ಕಲ್ಲುಗಳನ್ನು ತೆಗೆಯಲಾರಂಭಿಸಿದನು. ನಾನು ಒಮ್ಮೆಲೇ ಸ್ತಬ್ಧನಾದೆ; ಭಾವಿಸಿದೆ, ಇದೇನಿದು? ನನಗೆ ತಿಳಿದೇ ಇರಲಿಲ್ಲವಲ್ಲ, ನನ್ನಲ್ಲಿ ಎಷ್ಟು ಕಲ್ಲು, ಕಸ–ಕಡ್ಡಿ, ಎಷ್ಟೊಂದು ಬೇಡದ ವಸ್ತುಗಳಿವೆ! ಆಗ ನನಗೆ ಪ್ರಾಣ ಹೋಗುತ್ತಿರುವ ಅನುಭವ! ಓಹ್! ಮಣ್ಣನ್ನು ಕೆದಕುತ್ತಿರುವಾಗ ಅನುಭವಿಸಿದ ಯಾತನೆಯನ್ನು ನೆನೆದರೇ

ನಡುಗುತ್ತದೆ. ಸ್ವತಃ ನನ್ನಲ್ಲಿ ಎಷ್ಟು ಕೊಳಕಿನ ಮಿಶ್ರಣ, ಎಷ್ಟು ಕಶ್ಮಲ ಇದೆ!

"ಹೋಗಲಿ ಬಿಡು. ನಂತರ ನೋಡುತ್ತೇನೆ, ಕುಂಬಾರ ನನಗೆ ನೀರು ಬೆರೆಸಿ ಒಂದು ಸುಂದರವಾದ ಮಣ್ಣಿನ ಉಂಡೆಯನ್ನು ಮಾಡಿ ಎಸೆದ. ನಾನು ಯಾವುದೋ ಒಂದು ಆಕಾರ ತಾಳಿದೆ, ಹೊಸ ವ್ಯಕ್ತಿತ್ವ ಹೊಂದಿದೆ. ಕಲ್ಲು, ಕಸ, ಕಡ್ಡಿ ಮುಂತಾದ ಕಶ್ಮಲಗಳಿಂದ ಈಗ ನಾನು ಮುಕ್ತನಾಗಿದ್ದೇನೆ, ಪರಿಶುದ್ಧನಾಗಿದ್ದೇನೆ. ಆಹಾ! ಇದನ್ನು ಭಾವಿಸಿದರೇ ಎಷ್ಟೊಂದು ಆನಂದ! ಆದರೆ ಆವಾಗ ನನಗೆ ತಿಳಿದಿರಲಿಲ್ಲ, ನಾನು ಇನ್ನೂ ಕಷ್ಟಪಡಬೇಕಾಗುತ್ತದೆ ಎಂದು. ಅನಂತರ ಆ ಕುಂಬಾರ ನನ್ನನ್ನು ಕೈಯಲ್ಲಿ ಎತ್ತಿ, ಚಕ್ರಕ್ಕೆ ಎಸೆದುಬಿಟ್ಟ. ನನ್ನನ್ನು ಒತ್ತಿ, ಹಿಸುಕಿ, ಪುಡಿ ಪುಡಿ ಮಾಡಿಬಿಟ್ಟ. ನನ್ನ ಕಟ್ಟಕಡೆಯ ಕಾಲ ಬಂದೇ ಬಿಟ್ಟಿತು ಅಂದುಕೊಂಡೆ! ಎಂಥ ಅಸಹನೀಯವಾದ ಯಾತನೆ, ಎಷ್ಟು ದಾರುಣವಾದ ವ್ಯಥೆ! ಆ ಯಾತನೆಯನ್ನು ಹೇಳಿಕೊಳ್ಳಲು ನನ್ನಲ್ಲಿ ಭಾಷೆಯೇ ಇಲ್ಲ. ಆದರೆ ನಿಧಾನವಾಗಿ ನನ್ನಲ್ಲಿ ಭಾವನೆಗೆ ನಿಲುಕದ ಒಂದು ಪರಿವರ್ತನೆ ಉಂಟಾಯಿತು. ನಾನು 'ಏನೋ ಒಂದು' ಆಗಿ ಹೊರಬಂದೆ; ಒಂದು ನಿರ್ದಿಷ್ಟ ಆಕಾರ ತಾಳಿದೆ. ಆದರೆ ಆ ಸ್ವರೂಪ ತುಂಬಾ ಮೃದುವಾಗಿತ್ತು, ಅಪಕ್ವವಾಗಿತ್ತು. ನೋಡುತ್ತೇನೆ, ನನಗೆ ಏನನ್ನಾದರೂ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಇದೆಯೇ ಎಂದು. ಆದರೆ ಎಲ್ಲಿ? ಯಾವ ವಸ್ತುವನ್ನಾಗಲೀ ಗ್ರಹಿಸುವ ಶಕ್ತಿ ನನಗೆ ಇನ್ನೂ ಬಂದಿರಲಿಲ್ಲ. ಕುಮಾರ, ನನ್ನ ಕಥೆಯಿಂದ ನೀನು ಏನನ್ನಾದರೂ ಅರಿತುಕೊಳ್ಳುತ್ತಿರುವೆಯಾ?"

ರಾಜಕುಮಾರ ಮನಸ್ಸಿನಲ್ಲಿಯೇ ಅಂದುಕೊಂಡ: "ಅರಿತು ಕೊಳ್ಳುತ್ತಿದ್ದೇನೆ, ನನಗೆ ಮನವರಿಕೆಯಾಗುತ್ತಿದೆ. ಗುರುಗಳು ಹೇಳಿ ಕೊಡುವ ಪಾಠಗಳನ್ನು ಗ್ರಹಿಸುವ ಯೋಗ್ಯತೆಯನ್ನು ನಾನು ಇನ್ನೂ ಪಡೆದಿಲ್ಲ. ಇನ್ನೂ ಆ ಮಡಕೆಯಂತೆ ಮೃದುವಾಗಿದ್ದೇನೆ, ಹಸಿ ಯಾಗಿದ್ದೇನೆ."

ಮಡಕೆ ತನ್ನ ಕತೆಯನ್ನು ಮುಂದುವರಿಸಿತು, "ಇನ್ನೂ ನನ್ನ ಕತೆ ಮುಗಿದಿಲ್ಲ, ಕುಮಾರ. ಪ್ರಖರವಾದ ಸೂರ್ಯನ ತಾಪದಲ್ಲಿ ನಾನು ಬಿದ್ದುಕೊಂಡಿದ್ದೆ. ದಿನೇ ದಿನೇ ಸುಟ್ಟು ಹೋಗುತ್ತಿದ್ದೆ, ಬೆಂದುಹೋಗುತ್ತಿದ್ದೆ. ಆದರೆ ನಾನು ಮಣ್ಣುಪಾಲಾಗುತ್ತಿಲ್ಲವಲ್ಲ! ಅಷ್ಟೇ ಸಾಕು, ನೋಡುತ್ತೇನೆ, ಬಿದ್ದಲ್ಲೇ ಶಕ್ತನಾಗುತ್ತಾ ಹೋದೆ. ಭೇಷ್! ನಾನು ಬಿರುಸಾಗುತ್ತಿದ್ದೇನೆ. ನಾನು ಮುರಿದುಹೋಗುತ್ತಿಲ್ಲ, ಡೊಂಕಾಗುತ್ತಿಲ್ಲ. ನಾನು ನೆಟ್ಟಗೆ ಬಿಸಿಲಿನಲ್ಲೇ ಬಿದ್ದಿದ್ದೆ. ಮನದಲ್ಲಿ ಭಾವಿಸುತ್ತಿದ್ದೆ, ಈಗ ನನ್ನ ಕಷ್ಟಗಳ ಕೊನೆಯಾಯಿತೆಂದು ಕಾಣುತ್ತದೆ. ನೋಡುತ್ತೇನೆ, ದಢ ದಢ ಎಂದು ಕುಂಬಾರ ಬರುತ್ತಿದ್ದಾನೆ. ನನ್ನನ್ನು ಎತ್ತಿಕೊಂಡು, ಮೇಲೆ ಕೆಳಕ್ಕೆ ಎಲ್ಲಾ ಕಡೆ ಪರಿಶೀಲಿಸಿದನು. ಅರ್ಥವಾಯಿತು, ನನ್ನ ಬಗ್ಗೆ ಅವನಿಗೆ ಸಂತೃಪ್ತಿಯಾಗಿದೆ. ಅವನ ಮುಖದಲ್ಲಿ ನಗುವಿತ್ತು. ನನ್ನನ್ನು ತೆಗೆದುಕೊಂಡು ಹೋದ. ಎಲ್ಲಿಗೆ? ನೀನು ಊಹಿಸಲಾರೆ. ಧಗಧಗ ಉರಿಯುತ್ತಿರುವ ಬೆಂಕಿಯ ಜ್ವಾಲೆಯಲ್ಲಿ ನನ್ನನ್ನು ಬಿಸಾಡಿದ. ಆ ಅಗ್ನಿ ನನ್ನನ್ನು ಹೇಗೆ ಸುಟ್ಟಿತು ಗೊತ್ತೇ, ಕುಮಾರ? ಆ ಯಾತನೆಯಲ್ಲಿ ನನಗೆ ಜ್ಞಾನ ತಪ್ಪಿಹೋಯಿತು. ಸಾವಕಾಶವಾಗಿ ಆ ಬೆಂಕಿ ನನ್ನ ಅಂಗಾಂಗಗಳ ಅಣು-ಪರಮಾಣುಗಳಲ್ಲಿ ಅದ್ಭುತವಾದ ರೂಪಾಂತರ ವನ್ನು ತಂದಿತು. ಹಸಿಯಾಗಿದ್ದ ನನ್ನ ಮೈಬಣ್ಣ ಕೆಂಪಾಗಿಬಿಟ್ಟಿತು. ನನ್ನನ್ನು ನಾನೇ ಗುರುತಿಸಿಕೊಳ್ಳಲಾಗಲಿಲ್ಲ. ತದನಂತರ ನನ್ನನ್ನು ಕುಂಬಾರ ತಣ್ಣನೆಯ ನೀರಿನಲ್ಲಿ ಬಿಟ್ಟನು. ಸುಟ್ಟುಹೋಗಿದ್ದ ನನ್ನ ಅಂಗಾಂಗಗಳು ಗಟ್ಟಿಯಾದವು. ನಿಧಾನವಾಗಿ ಒಂದು ನೂತನ ದೇಹವನ್ನು ಗಳಿಸಿಕೊಂಡು, ಹೊಸದಾದವನಂತೆ ಭಾವಿಸಿದೆ. ಈಗ ನೀರು, ಹಾಲು, ತುಪ್ಪ, ಮೊಸರು ಇತ್ಯಾದಿ ಏನನ್ನು ಬೇಕಾದರೂ ನನ್ನಲ್ಲಿ ಇಡಬಹುದು – ಉಳಿಯುತ್ತದೆ, ನಷ್ಟವಾಗುವುದಿಲ್ಲ. ಈಗ ನನಗೆ ಸಂತೃಪ್ತಿ – ಏನು ಹೇಳುತ್ತೀಯೆ? **ಆಗ ಹಸಿಯಾಗಿದ್ದ 'ನಾನು' ನಶಿಸಿ, ಪಕ್ವವಾದ 'ನಾನು' ಈಗ ಜನ್ಮ ತಾಳಿದ್ದೇನೆ.**

"ಕುಂಬಾರ ಅನಂತರ ನನ್ನನ್ನು ಅಂಗಡಿಯಲ್ಲಿ ಜೋಡಿಸಿದ. ಯಾರಾದರೂ ನನ್ನನ್ನು ತಮ್ಮ ಕೆಲಸದಲ್ಲಿ ಉಪಯೋಗಿಸುತ್ತಾರೆಂದು ನಿರೀಕ್ಷಿಸುತ್ತಿದ್ದೆ. ಎಲ್ಲರೂ ವಿಚಾರಿಸುತ್ತಿದ್ದರು, ಚೌಕಾಶಿ ಮಾಡುತ್ತಿದ್ದರು, ನಂತರ ಹೊರಟು ಹೋಗುತ್ತಿದ್ದರು. ಕೊನೆಗೆ ಈ ಸಾಧುವಿನ ಶಿಷ್ಯ ನನ್ನನ್ನು ಕೊಂಡುಕೊಂಡು ಇಲ್ಲಿಗೆ ತಂದ. ನೋಡು ಎಷ್ಟು ಕಷ್ಟಪಟ್ಟ ನಂತರ ನಾನು ಸಾಧುಸೇವೆಗೆ ಯೋಗ್ಯನಾಗಿದ್ದೇನೆ. ಆದರೆ ನೀನು ನನ್ನನ್ನು ಬಿಸಾಡುತ್ತೀಯಲ್ಲಾ? ಬಿಸಾಡಿ ಓಡಿಹೋಗಲು ಇಚ್ಛಿಸುತ್ತೀಯಲ್ಲಾ? ಸಾಧುಸಂಗ ಬಿಟ್ಟು ಹೊರಟುಹೋಗುತ್ತೀಯಲ್ಲಾ? ಏನು, ನೀನು ನನಗಿಂತ ಹೆಚ್ಚು ಕಷ್ಟಪಟ್ಟಿರುವೆಯಾ? "

ಮಡಕೆಯ ಕಥೆ ಕೇಳಿ ರಾಜಕುಮಾರ ಲಜ್ಜೆಯಿಂದ ತಲೆ ಬಾಗಿಸಿದ. ಮರಳಿ ಗುರುವಿನ ಕಡೆಗೆ ಹೋದ; ಜೊತೆಗೆ ಮಡಕೆಯಲ್ಲಿ ಸ್ವಚ್ಛ ನೀರೂ ಇತ್ತು. ಗುರುಗಳು ಹಸನ್ಮುಖರಾಗಿ ಹೀಗೆ ಆಹ್ವಾನ ನೀಡಿದರು: **ನಿನ್ನ ಸಾಧನೆಯ ಪಾಠ ಇಂದಿನಿಂದ ಪ್ರಾರಂಭವಾಗಲಿದೆ, ಬಾ ಕುಮಾರ.**

## ಭಾರತ ದೇಶದ ಮಹಾಪುರುಷರು – ವರಾಹಮಿಹಿರ



ವರಾಹಮಿಹಿರನು ಕಪಿತ್ತಕ ಎಂಬ ಊರಿನಲ್ಲಿ ಜನಿಸಿದನು. ಅನಂತರ ಉಜ್ಜಯನಿಗೆ ಬಂದನು. ವರಾಹಮಿಹಿರನು ಭಾರತದ ಒಬ್ಬ ಶ್ರೇಷ್ಠ ಖಗೋಳಶಾಸ್ತ್ರಜ್ಞನಾಗಿದ್ದಾನೆ. ಅವನು ಬರೆದ ಗ್ರಂಥಗಳು ಇವು: **ಪಂಚಸಿದ್ಧಾಂತಿಕ, ಬೃಹಜ್ಜಾತಕ, ಲಘುಜಾತಕ, ಬೃಹತ್ಸಂಹಿತಾ.** ಈ ಗ್ರಂಥಗಳಲ್ಲಿ ವಿಷಯಗಳು ಗಹನವಾಗಿರುವುದಲ್ಲದೆ, ಭಾಷೆಯೂ ಕಾವ್ಯಮಯವಾಗಿದೆ. ವರಾಹಮಿಹಿರನು ವಾಸ್ತುಶಿಲ್ಪಶಾಸ್ತ್ರದಲ್ಲಿಯೂ ನಿಷ್ಣಾತನಾಗಿದ್ದನು. ಭೂಮಿಯ ರಚನೆಯು ದುಂಡಾಗಿದೆ ಎನ್ನುವುದನ್ನು ಮೊಟ್ಟಮೊದಲು ವಿವರಿಸಿದವನೇ ಇವನು. ಅರಬ್ ದೇಶದ ವಿದ್ವಾಂಸನಾದ ಆಲ್-ಬಿರೂನಿ ಇವನ ಹೆಸರನ್ನು ತನ್ನ ಕೃತಿಯಲ್ಲಿ ಉಲ್ಲೇಖಿಸಿದ್ದಾನೆ. ವರಾಹಮಿಹಿರನನ್ನು, 'ಸತ್ಯನಿಷ್ಠೆಯ ವಿಜ್ಞಾನಿ' ಎಂದು ಅವನು ಬಣ್ಣಿಸಿದ್ದಾನೆ.